# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | 34 |
| **ಸದಸ್ಯರ ಹೆಸರು** | ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ) |
| **ಉತ್ತರಿಸಬೇಕಾದ ದಿನಾಂಕ** | 27.01.2026 |
| **ಉತ್ತರಿಸುವ ಸಚಿವರು** | ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು. |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಕಳೆದ ಎರಡು ವರ್ಷಗಳಲ್ಲಿ ಪತ್ತೆಯಾದ ಅಕ್ರಮ ಗಣಿಗಾರಿಕೆ ಪ್ರಕರಣಗಳೆಷ್ಟು; ಈ ಸಂಬಂಧ ಎಷ್ಟು ಮೊತ್ತದ ದಂಡ ವಸೂಲಿ ಮಾಡಲಾಗಿದೆ ಮತ್ತು ಎಷ್ಟು ವಾಹನಗಳನ್ನು ಜಪ್ತಿ ಮಾಡಲಾಗಿದೆ;</td><td>
•ರಾಜ್ಯದಲ್ಲಿ ಅಕ್ರಮ ಗಣಿ ಚಟುವಟಿಕೆ ನಡೆಸುತ್ತಿದ್ದವರ ವಿರುದ್ಧ ಎಂ.ಎಂ.(ಡಿ &ಆರ್) ಕಾಯ್ದೆ-1957 ಮತ್ತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು-1994ರ ನಿಯಮಗಳಂತೆ ಮೊಕದ್ದಮೆಗಳನ್ನು ದಾಖಲಿಸಿ, ದಂಡವನ್ನು ವಿಧಿಸಿ ಸಂಗ್ರಹಿಸಲಾಗಿದ್ದು, ಕಳೆದ ಎರಡು ವರ್ಷಗಳಲ್ಲಿ ಅಕ್ರಮ ಕಲ್ಲು ಮತ್ತು ಮರಳು ಗಣಿಗಾರಿಕೆ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಕೈಗೊಂಡ ಕ್ರಮದ ವಿವರ ಕೆಳಕಂತಿದೆ:
<br><br>
ಅನಧಿಕೃತ ಕಲ್ಲು ಗಣಿಗಾರಿಕೆ:-
<table>
<tr><th>ಕ್ರ. ಸಂ.</th><th>ವರ್ಷ</th><th>ಪತ್ತೆ ಹಚ್ಚಿದ ಪ್ರಕರಣಗಳ ಸಂಖ್ಯೆ</th><th>ವಿಧಿಸಿದ ದಂಡ (ರೂ.ಲಕ್ಷಗಳಲ್ಲಿ)</th><th>ದಾಖಲಿಸಿರುವ ಮೊಕದ್ದಮೆಗಳು</th></tr>
<tr><td>1.</td><td>2024-25</td><td>657</td><td>715.83</td><td>186</td></tr>
<tr><td>2.</td><td>2025-26</td><td>553</td><td>489.82</td><td>171</td></tr>
<tr><td colspan="2">ಒಟ್ಟು</td><td>1210</td><td>1205.65</td><td>357</td></tr>
</table>
ಅನಧಿಕೃತ ಮರಳು ಗಣಿಗಾರಿಕೆ:-
<table>
<tr><th>ಕ್ರ. ಸಂ.</th><th>ವರ್ಷ</th><th>ಪತ್ತೆಹಚ್ಚಿದ ಪ್ರಕರಣಗಳಸಂಖ್ಯೆ</th><th>ವಿಧಿಸಿದದಂಡ (ರೂ.ಲಕ್ಷಗಳಲ್ಲಿ)</th><th>ದಾಖಲಿಸಿರುವ ಮೊಕದ್ದಮೆಗಳು</th></tr>
<tr><td>1.</td><td>2024-25</td><td>219</td><td>75.98</td><td>126</td></tr>
<tr><td>2.</td><td>2025-26</td><td>122</td><td>88.16</td><td>58</td></tr>
<tr><td colspan="2">ಒಟ್ಟು</td><td>341</td><td>164.14</td><td>184</td></tr>
</table>
<br>
ಅಕ್ರಮ ಉಪಖನಿಜ ಗಣಿಗಾರಿಕೆ ಮತ್ತು ಸಾಗಾಣಿಕೆಯಲ್ಲಿ ತೊಡಗುವ ವಾಹನಗಳನ್ನು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು-1994ರ ನಿಯಮ-43-A ರಂತೆ ಕಾಂಪೌಂಡಿಂಗ್ ಶುಲ್ಕ ಪಾವತಿಸಿಕೊಳ್ಳಲು ಕ್ರಮವಹಿಸಲಾಗುತ್ತಿದೆ.
</td></tr>
<tr><td>ಆ)</td><td>ಗಣಿ ಬಾಧಿತ ಜಿಲ್ಲೆಗಳಲ್ಲಿ ಸಂಗ್ರಹ ವಾಗಿರುವ ಜಿಲ್ಲಾ ಖನಿಜ ಪ್ರತಿಷ್ಠಾನ (DMF) ನಿಧಿಯ ಮೊತ್ತ ಎಷ್ಟು; ಈ ನಿಧಿಯನ್ನು ಆಯಾ ಭಾಗದ ರಸ್ತೆ, ಕುಡಿಯುವ ನೀರು ಮತ್ತು ಪರಿಸರ ಸುಧಾರಣೆಗೆ ಎಷ್ಟು ಬಳಸಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು);</td><td>ಗಣಿ ಬಾಧಿತ ಜಿಲ್ಲೆಗಳಲ್ಲಿ ಜಿಲ್ಲಾ ಖನಿಜ ಪ್ರತಿಷ್ಠಾನ (DMF) ಟ್ರಸ್ಟ್ ಅಡಿಯಲ್ಲಿ 2015-16 ರಿಂದ 2025-26ರ ಡಿಸೆಂಬರ್ ಅಂತ್ಯದವರೆಗೆ ಒಟ್ಟು ಮೊತ್ತ ರೂ.6437.58 ಕೋಟಿಗಳು ಸಂಗ್ರಹವಾಗಿದ್ದು, ಸಂಬಂಧಿಸಿದ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ಗಳಿಂದ ಆಯಾ ಜಿಲ್ಲಾ ವ್ಯಾಪ್ತಿಯಲ್ಲಿ ರಸ್ತೆ, ಕುಡಿಯುವ ನೀರು ಮತ್ತು ಪರಿಸರ ಸುಧಾರಣೆಗೆ ಬಳಸಲಾದ ಮೊತ್ತದ ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.</td></tr>
</table>

| | | |
|---|---|---|
| ಇ) | ಎಂ-ಸ್ಯಾಂಡ್ (M-Sand) ಗುಣಮಟ್ಟ ನಿಯಂತ್ರಣಕ್ಕೆ ಕೈಗೊಂಡಿರುವ ಕ್ರಮಗಳೇನು? | ರಾಜ್ಯದಲ್ಲಿ ಸ್ಥಾಪನೆಗೊಂಡಿರುವ ಕ್ರಷರ್ ಘಟಕದಲ್ಲಿ ಉತ್ಪಾದಿಸುವ ಎಂ-ಸ್ಯಾಂಡ್ ನ ಗುಣಮಟ್ಟವನ್ನು ಪರಿಶೀಲಿಸಲು **IS-383** ಮಾನದಂಡಗಳಿಗೆ ಅನುಗುಣವಾಗಿದೆಯೇ ಎಂಬುದರ ಬಗ್ಗೆ ದೃಢೀಕರಣಕ್ಕಾಗಿ ಪ್ರತಿ ಆರು ತಿಂಗಳಿಗೊಮ್ಮೆ ಉತ್ಪಾದಿಸಿರುವ ಎಂ-ಸ್ಯಾಂಡ್ ಮಾದರಿಗಳನ್ನು ಪ್ರಯೋಗ ಶಾಲೆಯಲ್ಲಿ ವಿಶ್ಲೇಷಿಸಿ ವರದಿಯನ್ನು ಕಡ್ಡಾಯವಾಗಿ ಪಡೆಯಲು ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ದಿನಾಂಕ:**15.04.2016** ಮತ್ತು **20.02.2021**ರ ಸುತ್ತೋಲೆಗಳ ಮೂಲಕ ಸೂಚನೆ ನೀಡಲಾಗಿದೆ. |
| ಈ) | ರಾಜ್ಯದಲ್ಲಿ ಅವಧಿ ಮುಗಿದಿರುವ ಎಷ್ಟು ಗಣಿ ಗುತ್ತಿಗೆಗಳನ್ನು ಹರಾಜು ಹಾಕಲು ಬಾಕಿ ಇದೆ: ಹಾಗೂ ಇದರಿಂದ ಸರ್ಕಾರಕ್ಕೆ ಆಗುತ್ತಿರುವ ಆದಾಯ ನಷ್ಟವೆಷ್ಟು? | ಉಪಖನಿಜ ಗಣಿ ಗುತ್ತಿಗೆಗಳ ಸಂಬಂಧ ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು- **2016** ಮತ್ತು **2023** ರಲ್ಲಿ ತಿದ್ದುಪಡಿಗಳ ನಿಯಮ-**8-A** ರಂತೆ ರಾಜ್ಯದಲ್ಲಿ ಮಂಜೂರಾದ ಕಲ್ಲುಗಣಿ ಗುತ್ತಿಗೆಗಳನ್ನು ಮೂಲ ಮಂಜೂರಾತಿ ದಿನಾಂಕದಿಂದ ನಿರ್ಧಿಷ್ಟ ಉಪಖನಿಜಗಳ ಸಂಬಂಧ **50** ವರ್ಷ ಹಾಗೂ ನಿರ್ಧಿಷ್ಟವಲ್ಲದ ಉಪಖನಿಜಗಳ ಸಂಬಂಧ **30** ವರ್ಷಗಳ ವರೆಗೆ ಪರಿಭಾವಿತ ಅವಧಿ ವಿಸ್ತರಣೆಗೆ **(Deemed extension)** ಅವಕಾಶ ಕಲ್ಪಿಸಿದೆ.<br><br>ಅದರಂತೆ, ಪ್ರಾರಂಭಿಕ ಗಣಿ ಗುತ್ತಿಗೆಯ ಅವಧಿ ಮುಗಿದಿದ್ದರೂ ಸಹ, ಸಂಬಂಧಿತ ತಿದ್ದುಪಡಿ ನಿಯಮಗಳ ಪ್ರಕಾರ ಅವುಗಳನ್ನು ಪರಿಭಾವಿತವಾಗಿ ವಿಸ್ತರಿಸಿದ ಕಲ್ಲುಗಣಿ ಗುತ್ತಿಗೆಗಳೆಂದು ಪರಿಗಣಿಸಲಾಗುತ್ತದೆ. ಆದ್ದರಿಂದ ಹರಾಜು ಪ್ರಕ್ರಿಯೆಗೆ ಒಳಪಡಿಸಿರುವುದಿಲ್ಲ. |

ಸಂಖ್ಯೆ:ಸಿಐ-ಎಂಎಂಎನ್/27/2026

**(ಎಸ್.ಎಸ್.ಮಲ್ಲಿಕಾರ್ಜುನ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು.

ಅನುಬಂಧ

## ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿ ಅಡಿಯಲ್ಲಿ 2015-16 ರಿಂದ 2025-26 ರ ಡಿಸೆಂಬರ್ ಅಂತ್ಯದವರೆಗೆ ರಸ್ತೆ, ಕುಡಿಯುವ ನೀರು ಮತ್ತು ಪರಿಸರ ಸುಧಾರಣೆಗೆ ಬಳಸಲಾದ ಮೊತ್ತದ ಜಿಲ್ಲಾವಾರು ವಿವರ.

ರೂ. ಕೋಟಿಗಳಲ್ಲಿ

| Sl.No | District | DMF Collection from 2015-16 to December 2025 | Drinking water supply | Environment Preservation and pollution control measures | Physical Infrastructure (Road) |
|---|---|---|---|---|---|
| 1 | Bagalkote | 153.17 | 19.53 | 1.14 | 58.34 |
| 2 | Ballari | 2935.89 | 388.65 | 42.89 | 441.62 |
| 3 | Belagavi | 89.06 | 2.72 | 0.14 | 20.23 |
| 4 | Bengaluru Rural | 55.66 | 6.46 | 0.84 | 7.16 |
| 5 | Bengaluru Urban | 65.87 | 4.60 | 3.95 | 26.06 |
| 6 | Bidar | 6.08 | 0.14 | 0.00 | 0.17 |
| 7 | Chamarajanagar | 46.83 | 0.72 | 2.54 | 8.71 |
| 8 | Chikkaballapura | 78.21 | 9.59 | 7.89 | 32.86 |
| 9 | Chikkamagaluru | 23.38 | 2.84 | 0.37 | 3.36 |
| 10 | Chitradurga | 728.88 | 30.84 | 32.27 | 82.68 |
| 11 | Dakshina Kannada | 40.02 | 0.15 | 0.33 | 1.19 |
| 12 | Davanagere | 15.21 | 2.10 | 0.58 | 4.39 |
| 13 | Dharwad | 13.72 | 0.20 | 0.04 | 2.13 |
| 14 | Gadag | 15.06 | 0.65 | 0.35 | 1.33 |
| 15 | Hassan | 30.26 | 1.48 | 0.33 | 2.30 |
| 16 | Haveri | 10.61 | 0.05 | 0.39 | 1.18 |
| 17 | Kalaburagi | 728.65 | 35.71 | 24.39 | 111.97 |
| 18 | Kodagu | 3.75 | 0.09 | 0.00 | 0.05 |
| 19 | Kolar | 23.32 | 0.20 | 0.44 | 1.35 |
| 20 | Koppal | 86.97 | 7.64 | 1.89 | 32.21 |
| 21 | Mandya | 14.40 | 0.84 | 0.00 | 1.45 |
| 22 | Mysuru | 6.08 | 0.05 | 0.00 | 0.40 |
| 23 | Raichur | 104.26 | 6.90 | 0.45 | 15.63 |
| 24 | Ramangara | 59.43 | 7.74 | 7.35 | 9.25 |
| 25 | Shivamogga | 4.30 | 0.06 | 0.03 | 0.07 |
| 26 | Tumkur | 60.66 | 7.20 | 0.95 | 9.61 |
| 27 | Udupi | 24.22 | 0.61 | 0.58 | 2.92 |
| 28 | Uttara Kannada | 19.23 | 1.56 | 0.45 | 3.82 |
| 29 | Vijayanagara | 976.44 | 52.31 | 32.54 | 421.09 |
| 30 | Vijayapura | 10.40 | 1.92 | 0.51 | 1.73 |
| 31 | Yadgiri | 7.53 | 0.00 | 0.00 | 0.15 |
| **Total** | | **6437.58** | **593.55** | **163.63** | **1305.39** |

M.C.Ku
ನೋಡಲ್ ಅಧಿಕಾರಿಗಳು, ಡಿಎಂಎಫ್